ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಹೆಚ್ ಪಿ ಸುಧಾಮ್‌ದಾಸ್ ರವರ ನಿಯಮ 72 ರಡಿಗಮನ ಸೆಳೆಯುವ ಸೂಚನೆಗೆ ಉತ್ತರ.

*****

ವಿಷಯ : "ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಹೆಚ್ ಪಿ ಸುಧಾಮ್ ದಾಸ್ ರವರು ದಿನಾಂಕ:16.07.2024 "ದಿ ಹಿಂದೂ" ಇಂಗ್ಲೀಷ್ ದಿನಪತ್ರಿಕೆಯಲ್ಲಿ ಈ ಹಿಂದೆ ಸರ್ಕಾರಿ ಆದೇಶದ ಅನುಸಾರ ಜಾರಿಯಲ್ಲಿದ್ದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದ ರೂ.7,000/ಗಳನ್ನು ರದ್ದುಪಡಿಸಿ ಪ್ರೋತ್ಸಾಹ ಧನ ಪಡೆಯುವ ಅರ್ಹತೆಯನ್ನು 60% ರಿಂದ 75%ಕ್ಕೆ ಏರಿಸಲಾಗಿರುವುದಲ್ಲದೇ ಆದಾಯ ಮಿತಿಯ ನಿರ್ಬಂಧವನ್ನು ವಿಧಿಸಲಾಗಿದೆ ಎಂದು ವರದಿಯಾಗಿದ್ದು, ಸದರಿ ವರದಿಯು ಸತ್ಯಾಂಶದಿಂದ ಕೂಡಿದ್ದಲ್ಲಿ ಸರ್ಕಾರದ ಈ ಆದೇಶವು ಪರಿಶಿಷ್ಟ ಜಾತಿ ವರ್ಗಗಳ ವಿದ್ಯಾರ್ಥಿಗಳ ಹಿತಾಸಕ್ತಿಗೆ ವಿರೋಧವಾದ್ದರಿಂದ ಈ ಕೂಡಲೇ ಸದರಿ ಮಾರ್ಪಾಡು ಆದೇಶವನ್ನು ರದ್ದುಪಡಿಸಿ ಈ ಮೊದಲು ಜಾರಿಯಲ್ಲಿದ್ದಂತೆ ಯಾವುದೇ ಆದಾಯದ ನಿರ್ಬಂಧವಿಲ್ಲದೇ ಸದರಿ ಸಮುದಾಯದ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲು ತಕ್ಷಣ ಸೂಕ್ತಆದೇಶ ಹೊರಡಿಸಲು."

******

ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಹಿಂದಿನ ಸರ್ಕಾರದ ಆದೇಶ ಸಂಖ್ಯೆ: ಸಕಇ 89 ಸಮನ್ವಯ 2013(2) ದಿನಾಂಕ:04.09.2013. ಆದೇಶದಲ್ಲಿ ಎಸ್.ಎಸ್. ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮದರ್ಜೆಯಲ್ಲಿ ಉತ್ತೀರಣರಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಶೆ.60 ರಿಂದ ಶೆ.74.99 ಅಂಕ ಪಡೆದಲ್ಲಿ ರೂ.7,000/-ಗಳನ್ನು ಮತ್ತು ಶೇ.75 ಕ್ಕಿಂತ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ರೂ.15,000/- ಗಳನ್ನು ಒಂದು ಬಾರಿಗೆ ಪ್ರೋತ್ಸಾಹ ಧನ ಮಂಜೂರು ಮಾಡಲು ಆದೇಶಿಸಲಾಗಿರುತ್ತದೆ.

ಮುಂದುವರೆದು, ವರ್ಷದಿಂದ ವರ್ಷಕ್ಕೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ.75ಕ್ಕೂ ಹೆಚ್ಚು ಅಂಕ ಪಡೆಯುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಗಣನೀಯವಾಗಿ ಏರಿಕೆ ಕಂಡು ಬರುತ್ತಿರುವುದರಿಂದಲೂ ಹಾಗೂ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಹೆಚ್ಚಿನ ಅಂಕಗಳನ್ನು ಪಡೆಯಲು ಉತ್ತೇಜನ ನೀಡುವ ದೃಷ್ಟಿಯಿಂದ ಅದರಲ್ಲೂ ಮುಖ್ಯವಾಗಿ ಪರಿಶಿಷ್ಟ ಜಾತಿಯ ಸಮುದಾಯದಲ್ಲಿ ಕಡಿಮೆ

2--

ಆದಾಯ ಹೊಂದಿರುವ ಕುಟುಂಬಗಳಿಂದ ಹಾಗೂ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ಮಕ್ಕಳಿಗೆ ಅತೀವ ಉತ್ತೇಜನ ನೀಡುವ ದೃಷ್ಟಿಯಿಂದ ಸರ್ಕಾರದ ಆದೇಶ ಸಂಖ್ಯೆ: ಸಕಇ 9 ಪಕವಿ 2023 ಬೆಂಗಳೂರು ದಿನಾಂಕ:02.012.2023 ರಲ್ಲಿ ಆದಾಯ ಮಿತಿ ಹಾಗೂ ಕನಿಷ್ಟ ಅಂಕಗಳನ್ನು ನಿಗಧಿಪಡಿಸಿ ಶೇ.75ಕ್ಕಿಂತ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಪ್ರೋತ್ಸಾಹ ಧನ ಮಂಜೂರು ಮಾಡಲು ಹಾಗೂ ಸದರಿ ವಿದ್ಯಾರ್ಥಿಗಳಿಗೆ ಕುಟುಂಬದ ವಾರ್ಷಿಕ ಆದಾಯ ರೂ.6.00 ಲಕ್ಷಗಳನ್ನು ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ.

(ಡಾ|| ಹೆಚ್. ಸಿ. ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು